


## ಲವ್‌ಇಟ್ ಚಾಕೊಲೇಟ್




ಮಕ್ಕಳು ಮತ್ತು ಹಿರಿಯರು ಎನ್ನದೇ ಎಲ್ಲರೂ ಇಷ್ಟಪಡುವ ಹೊಸ ಸ್ವಾದಗಳಲ್ಲಿ ಲವ್‌ಇಟ್ ಚಾಕೊಲೇಟ್ ಮಾರುಕಟ್ಟೆ ಪ್ರವೇಶಿಸಿದೆ.

ಮಿಲ್ಕ್ ಚಾಕೊಲೇಟ್, ಫ್ರುಟ್ಸ್ ಮತ್ತು ನಟ್ಸ್ ಸೇರಿದಂತೆ ಹಲವು ಮಿಶ್ರಣಗಳ ಆಹ್ಲಾದಕರ ರುಚಿಯೊಂದಿಗೆ ಇದು ಎಲ್ಲರೂ ಇಷ್ಟಪಡುವಂತಿದೆ ಎಂದು ಕಂಪೆನಿ ಹೇಳಿದೆ.

ಬೆಲೆ 5 ರೂಪಾಯಿಗಳಿಂದ ಆರಂಭ.

ವಿವರಗಳಿಗೆ: www.globalcp.in

## ಬರ್‌ಬೆರ್ರಿ ಸುಗಂಧ




ಮಹಿಳೆಯರ ಪರಿಕರಗಳ ತಯಾರಿಕ ಸಂಸ್ಥೆ ಬರ್‌ಬೆರ್ರಿ ಇದೀಗ ಸುಗಂಧದ್ರವ್ಯದ ಹೊಸ ಸಂಗ್ರಹ ಪರಿಚಯಿಸಿದೆ.

ಸೌಂದರ್ಯದ ಕುರಿತು ಹೆಚ್ಚಿನ ಕಾಳಜಿ ವಹಿಸುವ ಮಹಿಳೆಯರಿಗಾಗಿಯೇ ಈ ಸಂಗ್ರಹ ಎಂದಿರುವ ಕಂಪೆನಿ, ಉಡುಗೊರೆ ಕೊಡಲು ಇದು ಸೂಕ್ತ ಆಯ್ಕೆ ಎಂದಿದೆ.

ಹಲವು ವಿನ್ಯಾಸ ಮತ್ತು ಬಣ್ಣಗಳ ಸಂಯೋಜನೆಯ ಬ್ಯಾಗ್, ಸಾಂಪ್ರದಾಯಿಕ ಸ್ಕಾರ್ಫ್, ಪಾದರಕ್ಷೆ ಮತ್ತಿತರ ಪರಿಕರ ಸೇರಿದಂತೆ ಪ್ರತಿಯೊಬ್ಬ ಮಹಿಳೆಯು ಇಷ್ಟಪಡುವ ಸಂಗ್ರಹ ಇದರಲ್ಲಿದೆ.

ಜೊತೆಗೆ ಸನ್‌ಗ್ಲಾಸ್ ಮತ್ತು ಮೇಕಪ್ ಸಾಮಾಗ್ರಿಗಳೂ ಇದರ ವಿಶೇಷ.

ವಿವರಗಳಿಗೆ: www.burberry.com

## ಗೋದ್ರೆಜ್ ಹೇರ್ ಕಲರ್




ಸೌಂದರ್ಯಸಾಧನಗಳ ತಯಾರಿಕ ಸಂಸ್ಥೆ ಗೋದ್ರೆಜ್ ಇದೀಗ ತನ್ನ ಕೂದಲ ಬಣ್ಣಗಳ ಸರಣಿಯಲ್ಲಿ ಹೊಸ ಜೆಲ್ ಫಾರ್ಮುಲ ಸಹಿತ ಎಕ್ಸ್‌ಪರ್ಟ್ ನ್ಯಾಚುರಲ್ ಬ್ಲಾಕ್ ಎಂಬ ಹೇರ್ ಕಲರ್ ಹೊರತಂದಿದೆ.

ಇದನ್ನು ಬಳಸಿ ಕೇವಲ ಹತ್ತು ನಿಮಿಷಗಳಲ್ಲಿ ಕೂದಲಿಗೆ ನೈಸರ್ಗಿಕವಾದ ಕಪ್ಪು ಬಣ್ಣವನ್ನು ಪಡೆಯಲು ಸಾಧ್ಯ ಎಂದು ಕಂಪೆನಿ ಹೇಳಿದೆ.

ಇದು ಅಮೋನಿಯ ರಹಿತವಾಗಿದ್ದು, ಯಾವುದೇ ಅಡ್ಡಪರಿಣಾಮವಿಲ್ಲ. 5 ಗ್ರಾಂ ಪ್ಯಾಕ್‌ನ ಬೆಲೆ 16 ರೂಪಾಯಿಗಳು.

ವಿವರಗಳಿಗೆ: www.godrejexpert.com

## ವೋಗ್ ಐ ವೇರ್




ಫ್ಯಾಷನ್ ಕನ್ನಡಕಗಳ ತಯಾರಿಕ ಸಂಸ್ಥೆ ವೋಗ್ ಐ ವೇರ್ ಇದೀಗ ನೂತನ ಸಂಗ್ರಹವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಸನ್‌ಗ್ಲಾಸ್, ರೈಡಿಂಗ್ ಗ್ಲಾಸ್ ಸೇರಿದಂತೆ ಹಲವು ಸಂದರ್ಭಗಳಿಗೆ ಅನುಸಾರವಾಗಿ ಬಳಸಬಹುದಾದ, ಪ್ರಮಾಣೀಕೃತ ಲೆನ್ಸ್‌ಗಳು ಇದರ ವಿಶೇಷ.

ವಿವಿಧ ವಿನ್ಯಾಸ ಮತ್ತು ಬಣ್ಣಗಳನ್ನೊಳಗೊಂಡ ಆಕರ್ಷಕ ಸಂಗ್ರಹ ಪ್ರತಿಯೊಬ್ಬರ ಗಮನವನ್ನು ನಿಮ್ಮತ್ತ ಸೆಳೆಯುತ್ತದೆ ಎಂದು ಕಂಪೆನಿ ಹೇಳಿದೆ.

ವಿವರಗಳಿಗೆ: www.vogue-eyewear.com/in

## ವಿ ಗಾರ್ಡ್ ಟವರ್



ಎಲೆಕ್ಟ್ರಾನಿಕ್ ಮತ್ತು ಗೃಹೋತ್ಪನ್ನಗಳ ತಯಾರಿಕಾ ಸಂಸ್ಥೆ ವಿ ಗಾರ್ಡ್ ಇದೀಗ ಹೊಸ ಮಾದರಿಯ ಟವರ್ ಫ್ಯಾನ್ ಪರಿಚಯಿಸಿದೆ.

ಹೊಸ ವಿನ್ಯಾಸದಿಂದಾಗಿ ಸ್ವಲ್ಪ ಸ್ಥಳಾವಕಾಶ ಸಾಕು ಮತ್ತು ಕಡಿಮೆ ಶಬ್ದ ಮಾಡುತ್ತದೆ ಎಂದು ಕಂಪೆನಿ ಹೇಳಿದೆ.

ಗ್ರಾಹಕರ ಅಗತ್ಯಕ್ಕೆ ಅನುಗುಣವಾಗಿ ಹಲವು ಗಾತ್ರಗಳಲ್ಲಿ ಇದು ಲಭ್ಯವಿದ್ದು, ಕಡಿಮೆ ವಿದ್ಯುತ್ ಬಳಸುತ್ತದೆ.

ಬೆಲೆ 1795 ರೂಪಾಯಿಗಳಿಂದ ಆರಂಭ.

ವಿವರಗಳಿಗೆ: www.vguard.in

## ಇಂಟೆಕ್ಸ್ ಸ್ಮಾರ್ಟ್‌ಫೋನ್



ಕಂಪ್ಯೂಟರ್ ಭಾಗಗಳು ಮತ್ತು ಸ್ಮಾರ್ಟ್‌ಫೋನ್‌ಗಳ ತಯಾರಿಕಾ ಸಂಸ್ಥೆ ಇಂಟೆಕ್ಸ್, ತನ್ನ ಸ್ಮಾರ್ಟ್‌ಫೋನ್ ಸರಣಿಯಲ್ಲಿ ಕ್ಲೌಡ್ ಎನ್ ಮಾದರಿ ಹೊರತಂದಿದೆ.

1 ಜಿಬಿ ರ್‍ಯಾಮ್, 8 ಜಿಬಿ ಮೆಮೊರಿ, 8 ಮೆಗಾಪಿಕ್ಸೆಲ್ ಕ್ಯಾಮೆರಾ ಮತ್ತು 2 ಮೆಗಾಪಿಕ್ಸೆಲ್ ಸೆಲ್ಫಿ ಇದರ ವಿಶೇಷ. 4 ಇಂಚಿನ ತೆರೆಯೊಂದಿಗೆ, 1400 ಎಂಎಎಚ್ ಬ್ಯಾಟರಿ ಸಾಮರ್ಥ್ಯ ಹೊಂದಿದೆ. ಆನ್‌ಲೈನ್‌ನಲ್ಲೂ ಲಭ್ಯ.

ಬೆಲೆ 4199 ರೂಪಾಯಿಗಳು.

ಮಾಹಿತಿಗೆ: 9845706155

www.ebay.in